4. ನೆರೆಹೊರೆ ಕಾವಲು ಸಮಿತಿ ಯೋಜನೆಗಳನ್ನು ರಚಿಸಿ ಜಾರಿಗೊಳಿಸಲಾಗಿದೆ.

5. ಬಳ್ಳಾರಿ, ಗುಲ್ಬರ್ಗಾ ಮತ್ತು ಬೆಂಗಳೂರಿನಲ್ಲಿ ದರೋಡೆ ನಿಯಂತ್ರಕ ದಳಗಳು ಅಸ್ಥಿತ್ವದಲ್ಲಿರುತ್ತದೆ.

6. ಗಡಿ ಪ್ರದೇಶಗಳಲ್ಲಿ ಮಾಹಿತಿಯನ್ನು ಹಂಚಿಕೊಳ್ಳಲು ಕ್ರಮವಾಗಿ ಸಭೆಗಳನ್ನು ನಡೆಸಲಾಗುತ್ತಿದೆ.

ಪೊಲೀಸ್ ಇಲಾಖೆಯಲ್ಲಿ ಕಾನ್ಸ್‌ಟೇಬಲ್ ಹುದ್ದೆಗಳು

1841 (2288) ಶ್ರೀ ಮುದ್ದಹನುಮೇಗೌಡ ಎಸ್.ಪಿ. (ಕುಣಿಗಲ್):

ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಕಾನ್ಸ್‌ಟೇಬಲ್ ಹುದ್ದೆಗಳ ಸಂಖ್ಯೆ ಎಷ್ಟು;

(ಆ) ಹಾಗಿದ್ದಲ್ಲಿ ಇವುಗಳನ್ನು ಯಾವಾಗ ತುಂಬಲಾಗುವುದು?

ಶೀ ಮಲ್ಲಿಕಾರ್ಜುನ ಎಂ. ಖರ್ಗೆ (ಗೃಹ ಸಚಿವರು)

(ಅ) 1646 ಹುದ್ದೆಗಳು

(ಆ) ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ವಿದ್ಯುತ್ ಪ್ರಸರಣ ನಿಗಮದ ಅವ್ಯವಸ್ಥೆ

1842 (2283) ಶ್ರೀ ಮುನಿನರಸಿಂಹಯ್ಯ (ದೇವನಹಳ್ಳಿ):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ದೇವನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಮಂಜೂರಾಗಿರುವ ವಿದ್ಯಾನಗರ ಹಾಗೂ ಬೂದಿಗೆರೆ 66 ಕೆ.ವಿ. ಪವರ್ ಸ್ಟೇಷನ್‌ಗಳಿಗೆ 2000-2001 ಆಯವ್ಯಯದಲ್ಲಿ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ;

(ಆ) ದೇವನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಲೋ-ವೋಲ್ಟೇಜ್ ಆಗುತ್ತಿರುವ ಮತ್ತು ಪದೇ ಪದೇ ಪವರ್‌ಕಟ್ ಮಾಡುವ ಪದ್ಧತಿಯನ್ನು ತಪ್ಪಿಸುವಿರಾ;

(ಇ) ಕ್ಷೇತ್ರದಲ್ಲಿ ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳ ಬದಲಾವಣೆಗೆ 10-15 ದಿನಗಳಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ;

(ಈ) ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಇಂಜನಿಯರ್ ಮತ್ತು ಜೂನಿಯರ್ ಇಂಜನಿಯರ್ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದೇ?

ಶೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು)

(ಅ) ದೇವನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರಸ್ತುತ ವಿದ್ಯಾನಗರದ 66 ಕೆ.ವಿ. ಸ್ಟೇಷನ್ ಕೆಲಸಕ್ಕೆ ಮಾತ್ರ ಮಂಜೂರಾತಿ ನೀಡಿದ್ದು, ಇದಕ್ಕೆ ವಿವರವಾದ ಯೋಜನಾ ವರದಿಯೂ ಸಹ ತಯಾರಿಸಲ್ಪಟ್ಟಿದೆ. ಗ್ರಾಮೀಣ ವಿದ್ಯುದೀಕರಣ ನಿಗಮವು ಸಾಲ ಸೌಲಭ್ಯವನ್ನೂ ಸಹ ಮಂಜೂರು ಮಾಡಿರುತ್ತದೆ. ನಿಗಮದಿಂದ ಈಗಾಗಲೇ ಈ ಕೆಲಸಕ್ಕೆ ಆಡಳಿತಾತ್ಮಕ ಮಂಜೂರಾತಿ ದೊರಕಿದ್ದು, 2000-01ನೇ ಸಾಲಿನ ಆಯವ್ಯಯದಲ್ಲಿ ಈ ಕೆಲಸಕ್ಕೆ ರೂ. 345 ಲಕ್ಷಗಳನ್ನು ಒದಗಿಸಲಾಗಿದೆ. ಬೂದಿಗೆರೆಯಲ್ಲಿ ಒಂದು 66 ಕೆ.ವಿ. ಸಬ್ ಸ್ಟೇಷನ್ ನಿರ್ಮಾಣ ಮಾಡುವುದರ ಬಗ್ಗೆ ಅಲೋಚಿಸಲಾಗುತ್ತಿದೆ. ಇದನ್ನೂ ಪ್ರಾಥಮಿಕ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. ಆದುದರಿಂದ, ಪ್ರಸಕ್ತ ಸಾಲಿನ (2000-2001) ಆಯವ್ಯಯದಲ್ಲಿ ಹಣವನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

(ಆ) ಸಾಮಾನ್ಯವಾಗಿ ಬೇಸಿಗೆಯ ತಿಂಗಳುಗಳಲ್ಲಿ ನೀರಾವರಿ ಪಂಪ್‌ಸೆಟ್ಟುಗಳ ವಿದ್ಯುತ್ ಬಳಕೆಯು ಹೆಚ್ಚಾಗಿರುವುದರಿಂದ ರಾಜ್ಯದಲ್ಲಿ ಸ್ವಲ್ಪ ಕಡಿಮೆ ವೋಲ್ಟೇಜ್ ಪರಿಸ್ಥಿತಿಯು ತಲೆದೋರಿರುತ್ತದೆ. ಆದರಲ್ಲೂ ದೇವನಹಳ್ಳಿ ತಾಲ್ಲೂಕು ಸೇರಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲ್ಲೂಕುಗಳ ಪ್ರದೇಶಗಳಲ್ಲಿ ಈ ಕಡಿಮೆ ವೋಲ್ಟೇಜ್ ಪರಿಸ್ಥಿತಿಯು ಸ್ವಲ್ಪ ಹೆಚ್ಚಾಗಿರುತ್ತದೆ. ಪ್ರಸ್ತುತ ಮಂಜೂರಾಗಾರುವ ವಿದ್ಯಾನಗರದ ಸಬ್ ಸ್ಟೇಷನ್‌ನ್ನು ನಿರ್ಮಾಣ ಮಾಡಿ ಕಾರ್ಯಾರಂಭ ಮಾಡಿದ ನಂತರ ದೇವನಹಳ್ಳಿ ಕ್ಷೇತ್ರದಲ್ಲಿ, ವೋಲ್ಟೇಜ್ ಪರಿಸ್ಥಿತಿಯು ಗಣನೀಯ ಪ್ರಮಾಣದಲ್ಲಿ ಉತ್ತಮಗೊಳ್ಳುತ್ತದೆ. ಅಲ್ಲದೇ ದೊಡ್ಡಬಳ್ಳಾಪುರದ 220.66 ಕೆ.ವಿ. ಸ್ಟೇಷನ್ನಿಂದ ದೇವನಹಳ್ಳಿಗೆ ಸುಮಾರು 22 ಕಿ.ಮೀ. ಉದ್ದದ ಒಂದು ಕೆ.ವಿ. ಡಬಲ್ ಸರ್ಕ್ಯೂಟ್ ವಿದ್ಯುತ್ ಪ್ರಸರಣಾ ಮಾರ್ಗವನ್ನು ಸುಮಾರು 3 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ 27-1-2000ರಂದು ಕಾರ್ಯೋನ್ಮುಖಗೊಳಿಸಲಾಗಿದೆ. ಈ ಕ್ರಮದಿಂದಾಗಿ ದೇವನಹಳ್ಳಿ ತಾಲ್ಲೂಕಿನಲ್ಲಿ ವೋಲ್ಟೇಜ್ ಮಟ್ಟದಲ್ಲಿ ಸುಧಾರಣೆ ಉಂಟಾಗಿದೆ. ಬೂದಿಗೆರೆ ಪ್ರದೇಶದಲ್ಲಿ ಕಡಿಮೆ ವೋಲ್ಟೇಜ್ ಪರಿಸ್ಥಿತಿಯ ನಿವಾರಣೆಗಾಗಿ, ಬೂದಿಗೆರೆಯಲ್ಲಿ ಒಂದು 66:11 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ನಿರ್ಮಾಣ ಮಾಡಲು ಉದ್ದೇಶಿಸಿದೆ.

(ಇ) ಸಾಮಾನ್ಯವಾದ ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳನ್ನು ಎರಡು ದಿನಗಳ ಅವಧಿಯೊಳಗೆ ಬದಲಾವಣೆ ಮಾಡಲಾಗುತ್ತಿದೆ. ಕೆಲವೊಮ್ಮೆ ಅನಿವಾರ್ಯ ಕಾರಣಗಳಿಂದ ಬೇಕಿರುವ ಸಾಮರ್ಥ್ಯದ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಕೂಡಲೇ ಲಭ್ಯವಾಗದಿದ್ದಲ್ಲಿ, ಒಂದೆರಡು ದಿನಗಳ ವಿಳಂಬವಾಗುವ ಸಂಭವವಿರುತ್ತದೆ. ಆದಷ್ಟು ಕೂಡಲೇ ಕ್ರಮಗಳನ್ನು ಕೈಗೊಂಡು ವಿಫಲಹೊಂದಿದ ಟ್ರಾನ್ಸ್‌ಫಾರ್ಮರ್‌ಗಳನ್ನು ಸಾರ್ವಜನಿಕರ ಹಾಗೂ ನಿಗಮದ ಹಿತಾಸಕ್ತಿಯ ದೃಷ್ಟಿಯಿಂದ ಕೂಡಲೇ ಬದಲಾಯಿಸಲಾಗುತ್ತದೆ.

(ಈ) ನಿಗಮದಲ್ಲಿ ರಾಜ್ಯದಾದ್ಯಂತ ಸಹಾಯಕ ಇಂಜನಿಯರ್ ಮತ್ತು ಜೂನಿಯರ್ ಇಂಜನಿಯರ್ ಹುದ್ದೆಗಳು ಸಾಕಷ್ಟು ಪ್ರಮಾಣದಲ್ಲಿ ಖಾಲಿ ಇದ್ದು ಈ ಹುದ್ದೆಗಳನ್ನು ಭರ್ತಿಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.